ಓ.ಎಸ್.ನಂ.**381/2013**
ಪಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **05.12.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಕೆ.ಎಂ. ವಕೀಲರಿಂದ**

ನಾನು ಅಮ್ಮಜಮ್ಮನ ಮಗಳಾದ ಕೆಂಪಮ್ಮಳ ಮಗ. ಅಮ್ಮಜಮ್ಮಳಿಗೆ ಒಬ್ಬ ಅಣ್ಣ ಮತ್ತು ಅಕ್ಕ ಇದ್ದಾರೆ. ಅವರುಗಳೆಂದರೆ ಹನುಮಕ್ಕ ಮತ್ತು ಹನುಮಂತರಾಯಪ್ಪ. ವಾದಿ – ಅಮ್ಮಜಮ್ಮನವರು ಮೃತಪಟ್ಟು ಎರಡು ವರ್ಷಗಳಾಗಿವೆ. ಅವರು ಬದುಕಿರುವಾಗ ಅವರ ಅಣ್ಣನ ಕಡೆಯಿಂದ ದಾವಾ ಆಸ್ತಿಗಳಲ್ಲಿ ಭಾಗ ಪಡೆದುಕೊಂಡಿದ್ದಾರಾ? ಎಂದರೆ ಇಲ್ಲ. ಹನುಮಂತರಾಯಪ್ಪನವರಿಗೆ ದಾವಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಿವೆ ಎಂದರೆ ಹೌದು. ಹನುಮಂತರಾಯಪ್ಪನವರ ಕುಟುಂಬದ ವಿಧ್ಯಾಮಾನಗಳ ಬಗ್ಗೆ ನನಗೆ ಗೊತ್ತು. ಅಮ್ಮಜಮ್ಮನವರ ತಂದೆಯ ಹೆಸರು ಕೂಡ ಹನುಮಂತರಾಯಪ್ಪ ಎಂದರೆ ಸರಿ. ಸಾಕ್ಷಿಗೆ ದಿನಾಂಕಃ**06.03.2012** ರ ನೋಂದಾಯಿತ ದಾನಪತ್ರದ ದೃಢೀಕೃತ ನಕಲನ್ನು ತೋರಿಸಿ ಅದರಲ್ಲಿ ಬರೆದಿರುವ ಒಕ್ಕಣೆಯನ್ನು ಓದಿ ಸದರಿ ಒಕ್ಕಣೆಯನ್ನು ವಾದಿಯ ಅಣ್ಣನಾದ ಹನುಮಂತರಾಯಪ್ಪನವರು ವಾದಿಗೆ ಸರ್ವೆ ನಂ.**7/2**ಎ ರಲ್ಲಿ **9** ಗುಂಟೆ ಜಮೀನನ್ನು ದಾನ ಮಾಡಿದ್ದಾರೆಂದು ನಮೂದಾಗಿದೆ ಎಂದರೆ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಿ.ಡಿ.**1** ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕಃ**28.02.1966** ರ ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ತೋರಿಸಿ ಅದರಲ್ಲಿ ಗಂಗಪ್ಪ ಮತ್ತು ಅವರ ಹೆಂಡತಿ ಹನುಮಕ್ಕನವರು ಮೃತವಾದಿಗೆ ಸರ್ವೆ ನಂ.**144/2** ರಲ್ಲಿ **12** ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದು ಕೇಳಿದಾಗ ಸಾಕ್ಷಿಯು ಹೌದು ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ನಿ.ಡಿ.**2** ಎಂದು ಗುರುತಿಸಲಾಯಿತು. ಸದರಿ ಆಸ್ತಿಯನ್ನು ಮೃತ

ವಾದಿಯ ಅಣ್ಣನು ಕ್ರಯಪತ್ರದ ಮೂಲಕ ಕೊಡಿಸಿದ್ದಾರೆ ಎಂದರೆ ಗೊತ್ತಿಲ್ಲ. **1966** ರಲ್ಲಿ ವಾದಿಗೆ ಮದುವೆಯಾಗಿತ್ತಾ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ವಾದಿಯ ಹೆಸರಿನಲ್ಲಿ ಇದ್ದು, ಈಗ ಅವರ ಮಕ್ಕಳ ಹೆಸರಿಗೆ ಖಾತೆಯಾಗಿದೆ. ವಾದಿಗೆ ಅವರ ಪಿತ್ರಾರ್ಜಿತ ಆಸ್ತಿಗಳಲ್ಲಿ ಬರಬೇಕಾಗಿದ್ದ ಭಾಗವನ್ನು ದಾನಪತ್ರ ಮತ್ತು ಕ್ರಯಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಹನುಮಂತರಾಯಪ್ಪನವರು ತಮ್ಮಭಾಗಕ್ಕೆ ಬಂದ ಸ್ವತ್ತುಗಳನ್ನು ಕರೆಮುತ್ತಣ್ಣನವರಿಗೆ **2006** ರಲ್ಲಿ ಬೋಗ್ಯ ಮಾಡಿದ್ದರು ಎಂದರೆ ಗೊತ್ತಿಲ್ಲ. ವಾದಿಯ ಗಂಡನ ಹೆಸರು ವೆಂಕಟಪ್ಪ. ಅವರಿಗೆ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ, ಆದರೆ ಖರೀದಿ ಮಾಡಿದ ಆಸ್ತಿಗಳು ಇದ್ದಾವೆ. ವೆಂಕಟಪ್ಪನವರು ರೈತರಾಗಿದ್ದರು. ವೆಂಕಟಪ್ಪನವರು ಕೋಡಿಹಳ್ಳಿಯಲ್ಲಿ **22** ಗುಂಟೆ ಮತ್ತು **1** ಎಕರೆ **7** ಗುಂಟೆಯನ್ನು ಖರೀದಿಸಿದ್ದರು. ವಾದಿಯ ತಂದೆ ಹನುಮಂತರಾಯಪ್ಪನವರ ಅಣ್ಣ-ತಮ್ಮನ ನಡುವೆ ಬಹಳ ಹಿಂದೆಯೇ ವಿಭಾಗವಾಗಿತ್ತು ಎಂದರೆ ಗೊತ್ತಿಲ್ಲ. ವಾದಿಯ ಅಣ್ಣ ಮತ್ತು ಅಕ್ಕನವರು ಸುಮಾರು **50** ವರ್ಷಗಳಿಂದ ಬೇರೆ ಬೇರೆ ವಾಸ ಮಾಡುತ್ತಿದ್ದಾರೆ. ಅವರ ವ್ಯವಹಾರಗಳು ಕೂಡ ಬೇರೆ ಬೇರೆ ಇವೆ ಎಂದರೆ ಸರಿ. ದಾವಾ ಆಸ್ತಿಗಳೆಲ್ಲಾ ಹನುಮಂತರಾಯಪ್ಪನವರಿಗೆ ಅವರ ತಂದೆ ಹನುಮಂತರಾಯಪ್ಪನವರಿಂದ ಬಂದ ಸ್ವತ್ತುಗಳು ಎಂದರೆ ಸರಿ. ವಾದಿಗೆ ದಾನಪತ್ರ ಹಾಗೂ ಕ್ರಯಪತ್ರದ ಮೂಲಕ ಆಸ್ತಿ ಬಂದಿವೆ ಎಂದು ದಾವಾ ಪತ್ರದಲ್ಲಿ ತಿಳಿಸಿದ್ದೀರಾ? ಎಂದರೆ ಇಲ್ಲ.

**2006** ರಲ್ಲಿ ಅಸಲು ದಾವೆ ಸಂಖ್ಯೆ:**207/2006** ರಲ್ಲಿ ಲಿಂಗಪ್ಪನ ಮಕ್ಕಳು ದಾವಾ ಆಸ್ತಿಗೆ ಸಂಬಂಧಿಸಿದಂತೆ ಹಿಸ್ಸೆ ದಾವೆ ಹಾಕಿದ್ದರು ಎಂದರೆ ಗೊತ್ತಿಲ್ಲ. ಸದರಿ ಲಿಂಗಪ್ಪನವರು ವಾದಿಯ ದೊಡ್ಡಪ್ಪ ಎಂದರೆ ಸರಿ. ಸದರಿ ದಾವೆಯಲ್ಲಿ ಲಿಂಗಪ್ಪ ಹಾಗೂ ಅವರ ಸಹೋದರರ ನಡುವೆ **1956** ರಲ್ಲೇ ವಿಭಾಗವಾಗಿದೆ ಎಂದು ದಿನಾಂಕ:**02.07.2012** ರಲ್ಲಿ ದಾವೆಯನ್ನು ವಜಾ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯು ವಜಾ ಆಗಿರುವ ವಿಚಾರ ಹನುಮಕ್ಕ ಮತ್ತು ಅವರ ಮಕ್ಕಳಿಗೆ ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಯ ಹೆಸರಿಗೆ ಆಗಿರುವ ದಾನಪತ್ರ ಹಾಗೂ

ಕ್ರಯಪತ್ರದ ಬಗ್ಗೆ ಹನುಮಕ್ಕನವರಿಗೆ ಗೊತ್ತಿತ್ತಾ? ಎಂದರೆ ನನಗೆ ಮಾಹಿತಿ ಇಲ್ಲ. ವಾದಿಯು ಗೃಹಿಣಿಯಾಗಿದ್ದರು. ಅವರಿಗೆ ಯಾವುದೇ ಆದಾಯ ಇರಲಿಲ್ಲ. ವಾದಿ ಅಮ್ಮಜಮ್ಮನವರಿಗೆ ಬರಬೇಕಾಗಿದ್ದ ಅವರ ಭಾಗದ ಆಸ್ತಿಗಳನ್ನು ಅವರ ಅಣ್ಣನಾದ ಹನುಮಂತರಾಯಪ್ಪನವರು ದಾನಪತ್ರ ಹಾಗೂ ಕ್ರಯಪತ್ರದ ಮೂಲಕ ಕೊಟ್ಟಿರುವ ಕಾರಣ ವಾದಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಿಸ್ಸೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.